ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ,
ಆರೋಗ್ಯ ಸೌಧ, ಮಾಗಡಿರಸ್ತೆ, ಬೆಂಗಳೂರು-560023.

ದೂರವಾಣಿ:080-29603636 ಇ-ಮೇಲ್:spmbeckar@gmail.com

ಸಂಖ್ಯೆ: ಬಿಇಸಿ/ಐಪಿಜಿ/201/2021-22 ದಿನಾಂಕ:04.02.2022

## ಸುತ್ತೋಲೆ

**ಇವರಿಗೆ**

ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು/
ಜಿಲ್ಲಾ ಶಸ್ತ್ರಚಿಕಿತ್ಸಕರು, ಬೆಂಗಳೂರು ನಗರ/
ಬೆಂಗಳೂರು ಗ್ರಾಮಾಂತರ/ಚಿತ್ರದುರ್ಗ/ದಾವಣಗೆರೆ/
ಕೋಲಾರ/ಶಿವಮೊಗ್ಗ/ಚಿಕ್ಕಬಳ್ಳಾಪುರ/ರಾಮನಗರ/
ತುಮಕೂರು/ ಮೈಸೂರು/ ಚಿಕ್ಕಮಗಳೂರು/ಮಂಡ್ಯ/
ಮಂಗಳೂರು(ದ.ಕ)/ಚಾಮರಾಜನಗರ/ಕೊಡಗು/ಹಾಸನ/
ಉಡುಪಿ/ಬೆಳಗಾವಿ/ಬಾಗಲಕೋಟೆ/ವಿಜಯಪುರ/ಧಾರವಾಡ/
ಗದಗ/ಹಾವೇರಿ/ಕಾರವಾರ(ಉ.ಕ.)ಚಿಕ್ಕೋಡಿ ಅಪರ ಜಿಲ್ಲೆ ಕಲಬುರಗಿ/
ಕೊಪ್ಪಳ/ಬೀದರ್/ಬಳ್ಳಾರಿ/ವಿಜಯನಗರ/ರಾಯಚೂರು/ಯಾದಗಿರಿ/
ಪ್ರಾಂಶುಪಾಲರು, --------------- ತರಬೇತಿ ಕೇಂದ್ರ ---------------
ಜಿಲ್ಲೆ/ವೈದ್ಯಕೀಯ ಅಧೀಕ್ಷಕರು, ---------------- ಆಸ್ಪತ್ರೆ,
--------------------ಜಿಲ್ಲೆ/ಸಹನಿರ್ದೇಶಕರು, ---------------

ವಿಷಯ : 2022-23ನೇ ಸಾಲಿಗೆ ದಂತ ಸೇವಾನಿರತ ವೈದ್ಯರುಗಳ ಸ್ನಾತಕೋತ್ತರ ವ್ಯಾಸಂಗದ ಪ್ರವೇಶದ ಬಗ್ಗೆ.

ಉಲ್ಲೇಖ: ನ್ಯಾಷನಲ್ ಬೋರ್ಡ್ ಆಫ್ ಎಕ್ಸಾಮಿನೇಷನ್, (NEET-MDS) NEET-2022, ಕೈಪಿಡಿ (ಬ್ರೋಚರ್). ದಿನಾಂಕ: 31.01.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳ/ಅಧಿಸೂಚನೆಯ ಪ್ರಕಾರ 2022-23ನೇ ಸಾಲಿಗೆ ದಂತ ಸೇವಾನಿರತ ವೈದ್ಯರುಗಳನ್ನು ಸ್ನಾತಕೋತ್ತರ ವ್ಯಾಸಂಗಕ್ಕೆ ನಿಯೋಜನೆ ಹೊಂದಲು ಪ್ರವೇಶ ಪರೀಕ್ಷೆಗೆ ಹಾಜರಾಗಲು ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ, ನವದೆಹಲಿ ಇವರು ನಡೆಸುವ NEET-2022 (ದಂತ) ಪ್ರವೇಶ ಪರೀಕ್ಷೆ 2022ರ ಬಗ್ಗೆ ಅಂತರ್ಜಾಲದ ಮೂಲಕ ಪ್ರಕಟಿಸಿರುವ ಕಿರುಹೊತ್ತಿಗೆಯನ್ನು NEET-2022 ವೆಬ್‌ಸೈಟ್ ವಿಳಾಸ **www.nbe.gov.in/neetmds** (Dental) ರಲ್ಲಿ ಪ್ರಕಟಿಸಿರುವಂತೆ ಎಲ್ಲಾ ಮಾಹಿತಿಗಳನ್ನು ಪರಿಶೀಲಿಸಲು ಸೂಚಿಸಿದೆ ಹಾಗೂ ಉಲ್ಲೇಖಿತ ಸರ್ಕಾರದ ಆದೇಶದ ಪ್ರತಿಗಳನ್ನು ಮತ್ತು ಕಿರುಹೊತ್ತಿಗೆಯ ಪ್ರತಿಯನ್ನು ಹಾಗೂ ನಮೂನೆಗಳಲ್ಲಿ ನೀಡಬೇಕಾಗಿರುವ ಮಾಹಿತಿಯ ಬಗ್ಗೆ ಮಾದರಿ ನಮೂನೆ ಪ್ರತಿಗಳನ್ನು ಇಲಾಖೆಯ ವೆಬ್‌ಸೈಟ್ ವಿಳಾಸ www.karhfw.gov.inನಲ್ಲಿ ಪ್ರಕಟಿಸಿ ಮತ್ತು ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳ ಇ-ಮೇಲ್ ವಿಳಾಸಕ್ಕೂ ಸಹ ಕಳುಹಿಸಲಾಗಿರುತ್ತದೆ.

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 334 ಆರ್‌ಜಿಯು 2012, ದಿ: 23.11.2013ರ ನಿಯಮದಲ್ಲಿ ನಿಗದಿಪಡಿಸಿರುವಂತೆ ಪ್ರವೇಶ ಪರೀಕ್ಷೆಯ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ಅನ್ವಯವಾಗುವಂತೆ **ಕೆಸಿಎಸ್‌ಆರ್ 61 ಪರಿಶಿಷ್ಟ 2ಎ ರನ್ವಯ 5 ವರ್ಷಗಳ ಖಾಯಂ ಸೇವೆಯನ್ನು ಪೂರೈಸಿರತಕ್ಕದ್ದು ಹಾಗೂ 48 ವರ್ಷ ವಯೋಮಿತಿಯಲ್ಲಿರಬೇಕೆಂಬ ನಿಬಂಧನೆ ಇರುತ್ತದೆ.** ಕಾಲೇಜ್ ಆಫ್ ಫಿಜಿಷಿಯನ್ & ಸರ್ಜನ್ (**CPS**) ಮತ್ತು ಡಿಎನ್‌ಬಿ ವ್ಯಾಸಂಗವನ್ನು ನೂತನವಾಗಿ

ಆರಂಭಿಸಲಾಗಿದ್ದು, ನೀಟ್ ಪರೀಕ್ಷೆಯಲ್ಲಿ ಉನ್ನತ ವ್ಯಾಸಂಗಕ್ಕೆ ಅರ್ಹರಾಗುತ್ತಿರುವ ಸಂಖ್ಯೆ ಪ್ರತಿ ಶೈಕ್ಷಣಿಕ ವರ್ಷದಲ್ಲಿ ಇಳಿಮುಖವಾಗುತ್ತಿದ್ದು, ವಿದ್ಯಾರ್ಥಿಗಳ ಕೊರತೆಯ ಹಿನ್ನಲೆಯಲ್ಲಿ ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗದೆ 5 ವರ್ಷ ಸೇವೆ ಸಲ್ಲಿಸದ ಸೇವಾನಿರತ ವೈದ್ಯರುಗಳನ್ನು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಅಧಿಸೂಚನೆ ಸಂ: ಎಂಸಿಐ-18(1)/2018-ಎಂಇಡಿ/100818, ನವದೆಹಲಿ ದಿನಾಂಕ: 05.04.2018, ನಿಯಮ 9(4)ರನುಸಾರ ಹಾಗೂ ಸರ್ಕಾರದ ಅಧಿಸೂಚನೆ ಸಂ: ಆಕುಕ 54 ಆರ್‌ಜಿಯು 2019, ದಿನಾಂಕ: 08.03.2019ರನುಸಾರ **ಮೂರು ವರ್ಷಗಳ ಸೇವೆಯನ್ನು ಪೂರೈಸಿರುವರ ವೈದ್ಯರುಗಳನ್ನು ವ್ಯಾಸಂಗಕ್ಕೆ ನಿಯೋಜಿಸಲಾಗಿದ್ದು, ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.**

2. **ಪ್ರವೇಶ ಪರೀಕ್ಷೆಯ ಅರ್ಜಿಯನ್ನು ಸಲ್ಲಿಸುವಾಗ ಖಾಯಂ ಪೂರ್ವ ಸೇವಾವದಿ ಘೋಷಣೆಯಾಗಿರುವುದು ಕಡ್ಡಾಯವಾಗಿರುತ್ತದೆ. ಪರಿಶೀಲನೆಗಾಗಿ ಖಾಯಂಪೂರ್ವ ಸೇವಾವಧಿ ಘೋಷಣೆಯ ದೃಢೀಕೃತ ಸರ್ಕಾರಿ ಆದೇಶದ ಪ್ರತಿಯನ್ನು ಲಗತ್ತಿಸುವುದು ಕಡ್ಡಾಯವಾಗಿರುತ್ತದೆ.**
3. **ಇಲಾಖಾ ವಿಚಾರಣೆ ಬಾಕಿ ಇದ್ದು, ದೋಷಾರೋಪಣೆ ಪಟ್ಟಿ ಜಾರಿಯಾಗಿರುವಂತಹ ದಂತ ಸೇವಾನಿರತ ವೈದ್ಯರುಗಳ ಪ್ರವೇಶ ಪರೀಕ್ಷೆಯ ಅರ್ಜಿಯನ್ನು ಶಿಫಾರಸ್ಸು ಮಾಡತಕ್ಕದ್ದಲ್ಲ. ಇಲಾಖಾ ವಿಚಾರಣೆ ಬಾಕಿ ಇಲ್ಲದಿರುವ ಬಗ್ಗೆ ನೀಡಿರುವ ನಮೂನೆ ಪತ್ರದಲ್ಲಿ ದೃಢೀಕರಿಸಿ ಸಲ್ಲಿಸತಕ್ಕದ್ದು.**
4. ಅನಧಿಕೃತ ಗೈರು ಹಾಜರಿಯಾಗದಿರುವ ಬಗ್ಗೆ ದೃಢೀಕೃತ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
5. ಬಿಡಿಎಸ್ ಅಂಕಪಟ್ಟಿ ದೃಢೀಕೃತ ಪ್ರತಿ.
6. ಪಿಯುಸಿ ಅಂಕಪಟ್ಟಿ ದೃಢೀಕೃತ ಪ್ರತಿ.
7. ಬಿಡಿಎಸ್ ವ್ಯಾಸಂಗ ಪೂರೈಸಿದ ಬಗ್ಗೆ ಪ್ರಸ್ತುತ ಚಾಲ್ತಿಯಲ್ಲಿರುವ ಕೆಎಂಸಿ ವತಿಯಿಂದ ನೀಡಿರುವ ದೃಢೀಕೃತ ಪ್ರಮಾಣ ಪತ್ರ.
8. ಬಿಡಿಎಸ್ ವ್ಯಾಸಂಗ ಪೂರೈಸಿದ ಪದವಿಯ ದೃಢೀಕೃತ ಪ್ರಮಾಣ ಪತ್ರ.
9. ಈಗಾಗಲೇ ಸೇವಾನಿರತ ಕೋಟಾದಡಿಯಲ್ಲಿ ಯಾವುದೇ ತಜ್ಞತೆಯಲ್ಲಿ **ಸ್ನಾತಕೋತ್ತರ/ಡಿಪ್ಲೊಮೊ ವ್ಯಾಸಂಗ ಮಾಡಲಾಗಿದೆಯೇ? ವ್ಯಾಸಂಗ ಪೂರೈಸಿದ ಬಗ್ಗೆ ದೃಢೀಕೃತ ಪ್ರತಿ** ಸಲ್ಲಿಸತಕ್ಕದ್ದು.
10. ಪ್ರವೇಶ ಪರೀಕ್ಷೆಯ ಅರ್ಜಿ ಸಲ್ಲಿಸುವ ವೈದ್ಯರು ಈಗಾಗಲೇ ಸೇವಾನಿರತ ಕೋಟಾದಡಿಯಲ್ಲಿ ಪ್ರಥಮ ಬಾರಿಗೆ ನಿಯೋಜನೆಗೊಂಡು ವ್ಯಾಸಂಗ ಪೂರೈಸಿರುವರೇ ಎಂಬ ಬಗ್ಗೆ ಪರಿಶೀಲಿಸಿ ಮಾಹಿತಿ ಒದಗಿಸತಕ್ಕದ್ದು.
11. ಸರ್ಕಾರದ ಆದೇಶದನುಸಾರ ಸೇವಾನಿರತ ಕೋಟಾದಡಿಯಲ್ಲಿ ಲಭ್ಯವಾಗುವ ಸೀಟುಗಳಿಗೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸೇವಾನಿರತ ವೈದ್ಯರುಗಳನ್ನು ನಿಯೋಜಿಸುವ ಬಗ್ಗೆ ಪ್ರವೇಶ ಪರೀಕ್ಷೆಯ ಅರ್ಜಿಗಳನ್ನು ಇಲಾಖೆಯ ಮುಖಾಂತರ ಸಲ್ಲಿಸಬೇಕಾಗಿರುವುದರಿಂದ ಮೇಲೆ ತಿಳಿಸಿರುವಂತೆ ವೆಬ್‌ಸೈಟ್ ಮತ್ತು ಇ-ಮೇಲ್‌ನಲ್ಲಿ ಲಭ್ಯವಿರುವ ಮಾಹಿತಿಯನ್ನು ಪರಿಶೀಲಿಸಿ ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ದಂತ ಸೇವಾನಿರತ ವೈದ್ಯರುಗಳ ಪೈಕಿ ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳಲು ಇಚ್ಛಿಸುವ ವೈದ್ಯರುಗಳ ಅರ್ಜಿ ನಮೂನೆ ಮತ್ತು ಸಂಬಂಧಪಟ್ಟ ದಾಖಲೆ ಪ್ರತಿಗಳನ್ನು ದ್ವಿ-ಪ್ರತಿಯಲ್ಲಿ ದೃಢೀಕರಿಸಿ ಸಲ್ಲಿಸಲು ಸೂಚಿಸಿದೆ.
12. **ಕಿರು ಹೊತ್ತಿಗೆಯಲ್ಲಿ ಪ್ರಕಟಿಸಿರುವಂತೆ ಸಂಬಂಧಪಟ್ಟ ದಾಖಲಾತಿಗಳನ್ನು ತಮ್ಮ ಹಂತದಲ್ಲಿಯೇ ಪರಿಶೀಲಿಸಿ ಸೂಕ್ತ ದಾಖಲೆಗಳು ಸಲ್ಲಿಸದೇ ಇರುವಂತಹ ಯಾವುದೇ ಪ್ರವೇಶ ಪರೀಕ್ಷೆಯ ಅರ್ಜಿಗಳನ್ನು ತಮ್ಮ ಹಂತದಲ್ಲಿಯೇ ತಿರಸ್ಕರಿಸಲು ಸೂಚಿಸಿದೆ.** ಹಾಗೂ ಸೂಕ್ತ ದಾಖಲೆಗಳನ್ನು ಪರಿಶೀಲಿಸದೇ ಸಲ್ಲಿಸುವ ಪ್ರವೇಶ ಪರೀಕ್ಷೆಯ ಅರ್ಜಿಗಳ ಬಗ್ಗೆ ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳನ್ನು ಮತ್ತು ಸಂಬಂಧಪಟ್ಟ ವೈದ್ಯರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಅವರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದೆಂದು ಸೂಚಿಸಿದೆ.